# ಡಾ.ರಾಜಕುಮಾರ

ಮೌಲ್ಯ : ಶ್ರದ್ಧೆ ಮತ್ತು ಪರಿಶ್ರಮಗಳಿಂದ ಏನನ್ನು ಬೇಕಾದರೂ ಸಾಧಿಸಬಹುದು.

---

## ಪದಗಳ ಅರ್ಥ

1.ಅವಿಭಾಜ್ಯ - ಬೇರ್ಪಡಿಸಲಾಗದ
2.ವರ್ಷಧಾರೆ - ಮಳೆ
3.ವಾತ್ಸಲ್ಯ -ಪ್ರೀತಿ
4.ತ್ಯಜಿಸು - ಬಿಟ್ಟುಬಿಡು
5.ಹೊಣೆಗಾರಿಕೆ - ಜವಾಬ್ದಾರಿ
6.ಮಜಲು - ಹಂತ
7.ಅಗಣಿತ - ಲೆಕ್ಕವಿಲ್ಲದಷ್ಟು
8.ಹೆಗಲೆಣೆ - ನೆರವು

---

## ಕವಿ ಕೃತಿ ಪರಿಚಯ

ಕವಿ : ಡಾ.ಎಚ್.ಎಸ್.ಸತ್ಯನಾರಾಯಣ
ಜನ್ಮಸ್ಥಳ: ಚಿಕ್ಕಮಗಳೂರು
ತಂದೆ: ಶ್ರೀ.ಎಚ್.ಕೆ.ಶ್ರೀನಿವಾಸ
ತಾಯಿ : ಶ್ರೀಮತಿ ಇಂದಿರಮ್ಮ
ಕೃತಿಗಳು: ಅಪೂರ್ವ ಒಡನಾಟ, ಕಣ್ಣೋಟ.
ಪ್ರಶಸ್ತಿಗಳು: ಉದಯೋನ್ಮುಖ ವರ್ಧಮಾನ ಪ್ರಶಸ್ತಿ, ಸಾಹಿತ್ಯ ಪರಿಷತ್ತಿನ ದತ್ತಿ ಬಹುಮಾನ.

---

## ಅಭ್ಯಾಸಗಳು

ಅ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

೧.ಡಾ.ರಾಜಕುಮಾರ್ ಅವರ ಮೊದಲ ಹೆಸರೇನು?
ಉ: ಡಾ.ರಾಜಕುಮಾರ್ ಅವರ ಮೊದಲ ಹೆಸರು ಮುತ್ತುರಾಜ

---

೨.ರಾಜಕುಮಾರ್ ಅವರ ಜನ್ಮಸ್ಥಳ ಯಾವುದು?

ಉ: ರಾಜಕುಮಾರ್ ಅವರ ಜನ್ಮಸ್ಥಳ ಗಾಜನೂರು.

---

೩.ರಾಜಕುಮಾರರ್ ತಂದೆ-ತಾಯಿ ಯಾರು ?
ಉ: ರಾಜಕುಮಾರರ್ ತಂದೆ ಶ್ರೀ ಪುಟ್ಟಸ್ವಾಮಯ್ಯ
ತಾಯಿ ಶ್ರೀಮತಿ ಲಕ್ಷ್ಮಮ್ಮ.

---

೪. ನಾಯಕ ನಟರಾಗಿ ರಾಜಕುಮಾರ್ ರವರು ನಟಿಸಿದ
ಮೊದಲ ಚಿತ್ರ ಯಾವುದು?
ಉ: ನಾಯಕ ನಟರಾಗಿ ರಾಜಕುಮಾರ್ ರವರು ನಟಿಸಿದ
ಮೊದಲ ಚಿತ್ರ 'ಬೇಡರ ಕಣ್ಣಪ್ಪ

---

೫. ಯಾವ ಚಿತ್ರದ ಗಾಯನಕ್ಕೆ ರಾಜಕುಮಾರ್ ಅವರಿಗೆ
ರಾಷ್ಟ್ರ ಪ್ರಶಸ್ತಿ ದೊರೆತಿದೆ?
ಉ: ಜೀವನ ಚೈತ್ರ ಚಿತ್ರದ ಗಾಯನಕ್ಕೆ ರಾಜಕುಮಾರ್
ಅವರಿಗೆ ರಾಷ್ಟ್ರ ಪ್ರಶಸ್ತಿ ದೊರೆತಿದೆ.

---

೬. ಕರ್ನಾಟಕ ಸರ್ಕಾರ ರಾಜಕುಮಾರ್ ಅವರಿಗೆ ನೀಡಿದ
ಅತ್ಯುಚ್ಚ ಪುರಸ್ಕಾರ ಯಾವುದು?
ಉ: ಕರ್ನಾಟಕ ಸರ್ಕಾರ ರಾಜಕುಮಾರ್ ಅವರಿಗೆ
ನೀಡಿದ ಅತ್ಯುಚ್ಚ ಪುರಸ್ಕಾರ 'ದಾದಾ ಸಾಹೇಬ್ ಫಾಲ್ಕೆ '

---

ಆ. ಕೆಳಗಿನ ಪ್ರಶ್ನೆಗಳಿಗೆ ಎರಡು - ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.
೧.ಯಾವ ನಾಟಕ ಕಂಪನಿಗಳಲ್ಲಿ ರಾಜಕುಮಾರ್ ರವರು ಅಭಿನಯಿಸಿದರು?
ಉ: ರಾಜಕುಮಾರ್ ರವರು ಗುಬ್ಬಿ ವೀರಣ್ಣ ನಾಟಕ ಕಂಪನಿ ಹಾಗೂ ಶ್ರೀ
ಸುಬ್ಬಯ್ಯ ನಾಯ್ಡು ನಾಟಕ ಕಂಪನಿಗಳಲ್ಲಿ ಅಭಿನಯಿಸಿದರು.

---

೨.ರಾಜಕುಮಾರ್ ಅವರು ಅಭಿನಯಿಸಿದ ಭಕ್ತಿ ಪ್ರಧಾನವಾದ
ಚಿತ್ರಗಳಾವುವು?

ಉ: ಭಕ್ತವಿಜಯ, ಓಹಿಲೇಶ್ವರ, ಶ್ರೀಕೃಷ್ಣ ಗಾರುಡಿ, ಭಕ್ತ ಕುಂಬಾರ ಸಂತ ತುಕಾರಾಂ, ಭಕ್ತ ಕನಕದಾಸ, ಇವು ರಾಜಕುಮಾರ್ ಅವರು ಅಭಿನಯಿಸಿದ ಭಕ್ತಿ ಪ್ರಧಾನವಾದ ಚಿತ್ರಗಳಾಗಿವೆ.

---

೩.ಅಭಿಮಾನಿಗಳು ರಾಜಕುಮಾರ್ ರವರಿಗೆ ನೀಡಿದ ವಿಶೇಷಣ ಬಿರುದುಗಳು ಯಾವುವು?

ಉ: ನಟ ಸಾರ್ವಭೌಮ, ಕಲಾ ಕೌಸ್ತುಭ, ಕಲಾ ಕೇಸರಿ, ವರನಟ, ರಸಿಕರ ರಾಜ, ಗಾನಗಂಧರ್ವ, ಕನ್ನಡದ ಕಣ್ಮಣಿ ಇವು ಅಭಿಮಾನಿಗಳು ರಾಜಕುಮಾರ್ ರವರಿಗೆ ನೀಡಿದ ವಿಶೇಷಣ ಬಿರುದುಗಳು.

---

೪.ರಾಜಕುಮಾರ್ ಅವರ ಹೃದಯ ಸಂಪನ್ನತೆಗೆ ಒಂದೆರಡು ಉದಾಹರಣೆ ನೀಡಿ?

ಉ: ರಾಜಕುಮಾರ್ ಅವರು ಅಶಕ್ತ ಕಲಾವಿದರ ನೆರವಿಗೆ ಅನೇಕ ರಸಸಂಜೆ ಕಾರ್ಯಕ್ರಮಗಳನ್ನು ನಡೆಸಿ ನೆರವಿಗೆ ಬಂದಿದ್ದಾರೆ ಲೆಕ್ಕವಿಲ್ಲದಷ್ಟು ಸಹ ಕಲಾವಿದರು, ತಂತ್ರಜ್ಞರು, ಚಲನಚಿತ್ರ ಕಾರ್ಮಿಕರು, ಸಂಘ ಸಂಸ್ಥೆಗಳು ಇವರಿಂದ ಸಹಾಯವನ್ನು ಪಡೆದ ಉದಾಹರಣೆಗಳಿವೆ.

---

ಇ.ಈ ಕೆಳಗಿನ ಪ್ರಶ್ನೆಗಳಿಗೆ ಐದು - ಆರು ವಾಕ್ಯಗಳಲ್ಲಿ ಉತ್ತರಿಸಿರಿ.

1.ರಾಜಕುಮಾರ್ ಅವರ ಬಾಲ್ಯ ಜೀವನವನ್ನು ಪರಿಚಯಿಸಿ.

ಉ: ರಾಜಕುಮಾರ್ ಅವರ ಬಾಲ್ಯ ಹಳ್ಳಿಗಾಡಿನ ಸುಪ್ರಸನ್ನತೆ, ಸುಂದರ ಪರಿಸರ, ಮುಗ್ಧ ಜನರ ಆಚಾರ ವಿಚಾರಗಳು, ಹಳ್ಳ ಕೊಳ್ಳ, ಕಾಡು ಮುಂತಾದವೆಲ್ಲ ರಾಜಕುಮಾರ್ ಅವರ ಭಾವಲೋಕವನ್ನು ಹಿಗ್ಗಿಸುತ್ತಿತ್ತು. ಶಾಲೆಯಲ್ಲಿ ಕಲಿತದ್ದು ಮೂರನೆಯ ತರಗತಿವರೆಗೆ ಆದರೆ ಲೋಕಾನುಭವದ ಶಿಕ್ಷಣದ ಪಾತ್ರ ಇವರ ವ್ಯಕ್ತಿತ್ವವನ್ನು ರೂಪಿಸಿತು, ಇವರ ತಂದೆ ಅದ್ಭುತ ಕಲಾವಿದರಾಗಿದ್ದರು, ಸೋದರ ಮಾವಂದಿರು ಸೊಗಸಾದ ಗಾಯಕರಾಗಿದ್ದರು ಈ ಪರಿಸರದಲ್ಲಿ ಬಾಲ್ಯವನ್ನು ಕಳೆದ ರಾಜಕುಮಾರ್ ರಿಗೆ ಸಹಜವಾಗಿಯೆ ರಂಗಭೂಮಿ ಕೈಬೀಸಿ ಕರೆಯಿತು, ರಾಜಕುಮಾರ್ ಅವರು ಬಾಲ ನಟನಾಗಿ ಕಲಾ ಪ್ರಪಂಚಕ್ಕೆ ಕಾಲಿಟ್ಟರು.

---

2. ರಾಜಕುಮಾರ್ ಅವರ ಕುಟುಂಬವು ಚಲನಚಿತ್ರ ಕ್ಷೇತ್ರಕ್ಕೆ ಕೊಟ್ಟ ಕೊಡುಗೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.

ಉ: ರಾಜಕುಮಾರರ ಕುಟುಂಬವೇ ಕನ್ನಡ ಚಿತ್ರರಂಗದ ದೊಡ್ಡ ಮನೆಯೆನಿಸಿದೆ ಶ್ರೀಮತಿ ಪಾರ್ವತಮ್ಮನವರು ಚಿತ್ರ ನಿರ್ಮಾಪಕರಾಗಿ ವಿತರಕರಾಗಿ ದೊಡ್ಡ ಸಾಧನೆಗೈದರೆ ಮಕ್ಕಳಾದ ರಾಘವೇಂದ್ರ ರಾಜಕುಮಾರ್, ಶಿವರಾಜಕುಮಾರ್, ಪುನೀತ್ ರಾಜಕುಮಾರ್ ನಟರಾಗಿ ಗಾಯಕರಾಗಿ ನಾಡಿನ ಜನರ ಮನ ಗೆದ್ದವರು ತಮ್ಮ ಬಾಲ್ಯದಲ್ಲಿಯೇ 'ಬೆಟ್ಟದ ಹೂ' ಚಿತ್ರದ ಅಮೋಘ ಅಭಿನಯಕ್ಕಾಗಿ ರಾಷ್ಟ್ರಪ್ರಶಸ್ತಿ ಪಡೆದಿದ್ದರು, ಅವರು ತಂದೆಯಂತೆ 'ಕರ್ನಾಟಕ ರತ್ನ' ಎನ್ನಿಸಿದ ಸಾಹಸಗಾಥೆ ಬೇರೆಯದೇ ಇದೆ. ರಾಜಕುಮಾರ್ ಅವರ ಮೊಮ್ಮಕ್ಕಳು ಸಿನಿಮಾ ನಾಯಕರಾಗಿರುವುದು ಈ ಕಲಾಸಂಪನ್ನತೆಯು ಮೂರನೆಯ ತಲೆಮಾರಿಗೂ ಹರಿದು ಬಂದಿರುವುದರ ಪ್ರತೀಕವಾಗಿದೆ ಇವು ರಾಜಕುಮಾರರ ಕುಟುಂಬವು ಚಲನಚಿತ್ರ ಕ್ಷೇತ್ರಕ್ಕೆ ಕೊಟ್ಟ ಕೊಡುಗೆಗಳಾಗಿವೆ.

---

ಈ.ಸಂದರ್ಭ ಸೂಚಿಸಿ.

1.ಮುತ್ತುರಾಯ ಸ್ವಾಮಿಯ ಹೆಸರೇ ಮುತ್ತುರಾಜ ಆಯಿತು.

ಆಕರ: ಈ ಮೇಲಿನ ವಾಕ್ಯವನ್ನು ಡಾ.ಎಚ್.ಎಸ್.ಸತ್ಯನಾರಾಯಣ ಅವರು ಬರೆದ ಡಾ.ರಾಜಕುಮಾರ್ ಪಾಠದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ರಾಜಕುಮಾರರ ತಂದೆ ತಾಯಿ ಗಂಡು ಮಗು ಕರುಣಿಸೆಂದು ತಮ್ಮ ಇಷ್ಟದೈವ ಮುತ್ತತಿರಾಯನಿಗೆ ಹರಕೆ ಹೊತ್ತಿದ್ದರಂತೆ ಹಾಗಾಗಿ ಆ ದೇವರ ಹೆಸರನ್ನೆ ಇಟ್ಟ ಸಂದರ್ಭವನ್ನು ವಿವರಿಸಲು ಈ ವಾಕ್ಯವನ್ನು ಬಳಸಲಾಗಿದೆ.

ಸ್ವಾರಸ್ಯ : ರಾಜಕುಮಾರರ ತಂದೆ ತಾಯಿ ದೇವರಲ್ಲಿ ಭಕ್ತಿ ಉಳ್ಳವರಾಗಿದ್ದರು.

---

2.ರಂಗಭೂಮಿ ಕೈ ಬೀಸಿ ಕರೆಯಿತು.

ಆಕರ: ಈ ಮೇಲಿನ ವಾಕ್ಯವನ್ನು ಡಾ.ಎಚ್.ಎಸ್.ಸತ್ಯನಾರಾಯಣ ಅವರು ಬರೆದ ಡಾ.ರಾಜಕುಮಾರ್ ಪಾಠದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ರಾಜಕುಮಾರರ ತಂದೆ ಪುಟ್ಟಸ್ವಮಯ್ಯನವರು ಅದ್ಭುತ ರಂಗ ಕಲಾವಿದರಾಗಿದ್ದರು ಸೋದರ ಮಾವಂದಿರು ಸೊಗಸಾದ ಗಾಯಕ ರಾಗಿದ್ದರು ಈ ಪರಿಸರದಲ್ಲಿ ಬೆಳೆದ ರಾಜಕುಮಾರ ಅವರು ಸಹಜವಾಗಿಯೇ ರಂಗಭೂಮಿ ಪ್ರವೇಶಿಸಿದರು ಎಂದು ಹೇಳುವ ಸಂದರ್ಭದಲ್ಲಿ ಈ ಮೇಲಿನ ವಾಕ್ಯವನ್ನು ಬಳಸಲಾಗಿದೆ.

ಸ್ವಾರಸ್ಯ: ಕಲೆ ರಾಜಕುಮಾರರ ರಕ್ತದಲ್ಲಿಯೇ ಹರಿದು ಬಂದಿತ್ತು.

---

3.ಬೇರೆ ಭಾಷೆಯ ಚಿತ್ರಗಳಲ್ಲಿ ನಟಿಸಲು ಒಪ್ಪಲಿಲ್ಲ.

ಆಕರ: ಈ ಮೇಲಿನ ವಾಕ್ಯವನ್ನು ಡಾ.ಎಚ್.ಎಸ್.ಸತ್ಯನಾರಾಯಣ ಅವರು ಬರೆದ ಡಾ.ರಾಜಕುಮಾರ್ ಪಾಠದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ರಾಜಕುಮಾರ ಕನ್ನಡ ಪ್ರೀತಿ ಅಭಿಮಾನ ಸದಾ ಅವರನ್ನು ಸ್ಮರಿಸುವಂತೆ ಮಾಡುತ್ತದೆ ಪರ ಭಾಷೆಯಿಂದ ಎಂತಹ ಆಮೀಷ ಒಡ್ಡಿದರು ಅವರು ಕನ್ನಡದ ಬಿಟ್ಟು ಬೇರೆ ಭಾಷೆಯ ಚಿತ್ರಗಳಲ್ಲಿ ನಟಿಸಲು ಒಪ್ಪಲಿಲ್ಲ ಎಂಬುದನ್ನು ತಿಳಿಸುವ ಸಂದರ್ಭದಲ್ಲಿ ಈ ಮೇಲಿನ ವಾಕ್ಯವನ್ನು ಬಳಸಲಾಗಿದೆ.

ಸ್ವಾರಸ್ಯ: ರಾಜಕುಮಾರರದು ಅನನ್ಯ ಕನ್ನಡ ಪ್ರೀತಿ.

---

## ಭಾಷಾ ಅಭ್ಯಾಸ

ಅ.ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.

1.ರಾಜಕುಮಾರ್ ಅವರು ಜನಿಸಿದ್ದು 24 ಏಪ್ರಿಲ್ 1929

2.ಶ್ರೀಮತಿ ಪಾರ್ವತಮ್ಮ ಎಂಬುವರು ರಾಜಕುಮಾರ್ ಅವರ ಶ್ರೀಮತಿಯವರು.

3.ರಾಜಕುಮಾರ ಮೊದಲಿಗೆ ಗುಬ್ಬಿವೀರಣ್ಣ ಅವರ ನಾಟಕ ಕಂಪನಿಯಲ್ಲಿ ಅಭಿನಯಿಸಿದರು.

4.ಮೈಸೂರು ವಿಶ್ವ ವಿದ್ಯಾಲಯವು ರಾಜಕುಮಾರ್ ಅವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿದೆ.

5.ಗಾನಗಂಧರ್ವ ಎಂಬುದು ರಾಜಕುಮಾರ್ ಅವರ ಗಾಯನಕ್ಕೆ

ಜನ ನೀಡಿದ ಬಿರುದು.

---

## ಆ.ಹೊಂದಿಸಿ ಬರೆಯಿರಿ

| ಅ. | ಬ |
|---|---|
| 1.ಜನ್ಮಸ್ಥಳ. | - ಗಾಜನೂರು |
| 2.ಮೊದಲ ಹೆಸರು. | - ಮುತ್ತುರಾಜ |
| 3.ಜೀವನಚೈತ್ರ. | - ರಾಷ್ಟ್ರಪ್ರಶಸ್ತಿ |
| 4.ಮೊದಲ ಚಿತ್ರ. | - ಬೇಡರ ಕಣ್ಣಪ್ಪ |
| 5.ಮೊದಲ ಗಾಯನ | - ಸಂಪತ್ತಿಗೆ ಸವಾಲ್ |

---

## ಉಕ್ತಲೇಖನ

1.ಇಷ್ಟದೈವ
2.ಪ್ರತಿಭೆ
3.ಲೋಕಾನುಭವ
4.ಆತ್ಮವಿಶ್ವಾಸ
5.ಚಿತ್ರರಂಗ
6.ಕಂಠ
7.ಭಾವಗೀತೆ
8.ಕಲಾಸಂಪನ್ನ
9.ಸರ್ಕಾರ
10.ಶ್ರದ್ಧೆ

---